# ನಟನೆಯನ್ನು ಕಲಿಯುತ್ತಿದ್ದೇನೆ

**ನಂದೀಶ್**
ಉದಯದ
'ಕಣ್ಮಣಿ'ಯ ಕಿಷನ್



★ *ಕಿಷನ್ ಎಂತಹ ಹುಡುಗ?*

ಆತ ಲವ್ಲಿ ಬಾಯ್. ಎಲ್ಲರೂ ಮೆಚ್ಚುವ ಕಣ್ಮಣಿ. ಅವನ ಬಗ್ಗೆ ಯಾರಿಗೂ ದ್ವೇಷವಿಲ್ಲ. ಶ್ರೀಮಂತ ಹುಡುಗ. ಕಂಪನಿಯ ಮಾಲೀಕನಾಗಿದ್ದರೂ ನಡವಳಿಕೆಯಲ್ಲಿ ತುಂಬಾ ಸರಳತನ ಇದೆ. ಈಗ ಅವನಲ್ಲಿ ಪ್ರೇಮಾಂಕುರಿಸಿದೆ. ಕಥಾ ನಾಯಕಿಗೆ ತನ್ನ ಪ್ರೇಮ ನಿವೇದನೆ ಮಾಡಿಕೊಳ್ಳುತ್ತಿದ್ದಾನೆ. ಅವಳಿಗೆ ಸಂಸ್ಥೆಯ ಯಜಮಾನ ಎಂದು ಗೊತ್ತಿಲ್ಲ. ಸಾಮಾನ್ಯ ವ್ಯಕ್ತಿಯಂತೆ ಪರಿಚಯವಾಗಿ ಅವಳ ಸ್ನೇಹ, ವಿಶ್ವಾಸವನ್ನು ಸಂಪಾದಿಸಿದ್ದಾನೆ.

★ *ತೆರೆಯಲ್ಲಿ ಕಾಣಿಸಿಕೊಳ್ಳಲು ಮಾಡಿದ ಸಾಹಸಗಳ ಬಗ್ಗೆ ಹೇಳಿ..*

ನಟನಾಗಬೇಕು ಎನ್ನುವ ಬಯಕೆ ಬಾಲ್ಯದಲ್ಲಿಯೇ ನನ್ನಲ್ಲಿ ಮೊಳಕೆಯೊಡೆದಿತ್ತು. ಅದನ್ನು ಯಾರ ಬಳಿಯೂ ಹೇಳಿಕೊಂಡಿರಲಿಲ್ಲ. ಹದಿಹರೆಯದ ದಿನಗಳಲ್ಲಿ ಅದರ ತೀವ್ರತೆ ಹೆಚ್ಚಾಯಿತು. ಅದಕ್ಕೆ ಪ್ರೇರಣೆಯಾಗಿದ್ದು ಒಂದು ಕಡೆ ಸಿನಿಮಾ ಆದರೆ, ಮೂಲ ಕಾರಣ ನಾನು ಸುಂದರವಾಗಿರುವುದು. ಇದೇ ಕಾರಣಕ್ಕೆ ಎಲ್ಲರೂ ನನ್ನನ್ನು 'ಏನೋ ಹೀರೋ ಇದ್ದಂಗಿದಿಯಾ? ಸಿನಿಮಾ ಯಾಕೆ ಸೇರಬಾರದು?' ಎಂದು ಹೇಳುತ್ತಿದ್ದರು. ಸಂಬಂಧಿಕರು, ಸ್ನೇಹಿತರ ಆ ಮಾತುಗಳು ಕೂಡ ನನ್ನನ್ನು ಜಾಗೃತಗೊಳಿಸಿದವು. ಕನಸು ಕಂಡ ಮಾತ್ರಕ್ಕೆ ನಟನಾಗಲು ಹೇಗೆ ಸಾಧ್ಯ? ಅದಕ್ಕಾಗಿ ತುಂಬಾ ಕಷ್ಟದ ಹಾದಿಯನ್ನು ಸವೆಸಿದ್ದೇನೆ. ನಮ್ಮ ಪೋಷಕರಿಗೆ ಗೊತ್ತಿಲ್ಲದಂತೆ ನಿರಂತರವಾಗಿ ಆಡಿಷನ್‌ಗಳಿಗೆ ಹೋಗುತ್ತಿದ್ದೆ. ಅಷ್ಟರಲ್ಲಿ ನಾನು ಮೆಡಿಕಲ್ ಲ್ಯಾಬ್ ಟೆಕ್ನಿಷಿಯನ್ (ಡಿಎಂಎಲ್‌ಟಿ) ಮಾಡಿ ಕೆಲಸಕ್ಕೆ ಹೋಗುತ್ತಿದ್ದೆ. ಅದನ್ನು ಬಿಟ್ಟು ಅಭಿನಯವನ್ನು ಅರಸಿ ಅಲೆದೆ. ಈಗ ಅದನ್ನೇ ಬದುಕನ್ನಾಗಿ ಸ್ವೀಕರಿಸಿದ್ದೇನೆ.

★ *ನಟನೆಯನ್ನು ಮೈಗೂಡಿಸಿಕೊಂಡಿದ್ದು ಹೇಗೆ?*

ನಟನೆಯೇ ಗೊತ್ತಿಲ್ಲದ ನನಗೆ ನಟನೆ ಕಲಿಯಲೇಬೇಕು ಎನ್ನುವ ಸವಾಲು ಎದುರಾಯಿತು. ನಟನೆಯನ್ನು ಕಲಿತರೆ ಸುಲಭ ಆಗುತ್ತೆ ಎಂದು ರಂಗಭೂಮಿಯತ್ತ ಮುಖಮಾಡಿದೆ. 'ಚಂದ್ರಿಕಾ' 'ತುಘಲಕ್' ನಾಟಕಗಳಲ್ಲಿ ಬಣ್ಣವನ್ನು ಹಚ್ಚಿ ರಂಗ ತಾಲೀಮು ಆರಂಭಿಸಿದೆ. 'ಗಾಳಿಪಟ' 'ನೀಲಿ' ಧಾರಾವಾಹಿಗಳಲ್ಲಿಯೂ ಅವಕಾಶ ಸಿಕ್ಕಿತು. 'ಅಂಧದಾರ' ಸಿನಿಮಾದಲ್ಲಿ ನಾಯಕನಾಗಿ ನಟಿಸಿದೆ. ಈಗ ಉದಯದ ಕಣ್ಮಣಿಯಲ್ಲಿಯೂ ನಾಯಕನ ಪಾತ್ರ ಸಿಕ್ಕಿದೆ. ಅಭಿನಯವನ್ನು ಕಲಿಯುತ್ತಾ ಸಾಗುತ್ತಿದ್ದೇನೆ.

★ *ಆರಂಭದ ದಿನಗಳು ಹೇಗಿದ್ದವು?*

ಹೇಗೋ ಉದ್ಯೋಗವೊಂದು ಇತ್ತು. ಅದನ್ನು ಬಿಟ್ಟು ಬದುಕನ್ನೇ ಹೊಸ ಪ್ರಯೋಗಕ್ಕೆ ಒಡ್ಡಿಕೊಂಡಿದ್ದು ನಮ್ಮ ಪೋಷಕರಿಗೆ ಇಷ್ಟ ಇರಲಿಲ್ಲ. ಆ ಕಾರಣಕ್ಕೆ ಅವರು ತುಂಬಾ ವಿರೋಧ ಮಾಡುತ್ತಿದ್ದರು. ನನ್ನಲ್ಲಿ ಇದ್ದ ಆತ್ಮ ವಿಶ್ವಾಸ ಏನಾದರೂ ಮಾಡಿಯೇ ತೀರುತ್ತೇನೆ ಎನ್ನುತ್ತಿತ್ತು. ನನ್ನ ಮನಸ್ಸಿನ ಮಾರ್ಗದ ಹಾದಿ ಹಿಡಿದೆ. ಈಗ ನಮ್ಮ ಪೋಷಕರೂ ಪ್ರೋತ್ಸಾಹಿಸುತ್ತಿದ್ದಾರೆ. ಒಳ್ಳೆಯ ನಟನಾಗಬೇಕು ಎನ್ನುವುದು ಸದ್ಯದ ನನ್ನ ಸಂಕಲ್ಪ

■ **ರಾಘವೇಂದ್ರ**